**ಭಾರತೀಯ ಜನತಾ ಪಾರ್ಟಿ**

**11, ಅಶೋಕ ರಸ್ತೆ, ನವದೆಹಲಿ–110 001**

**ಶ್ರೀ ಪ್ರಕಾಶ್ ಜಾವ್ಡೇಕರ್ ನೀಡಿದ ಹೇಳಿಕೆ**

**ರಾಷ್ಟ್ರೀಯ ವಕ್ತಾರ ಹಾಗೂ ಸಂಸದ, ರಾಜ್ಯಸಭಾ**

ಯುಪಿಎ ಆಳ್ವಿಕೆಯ ಮತ್ತೊಂದು ಭಾರಿ ಮೊತ್ತದ ಹಗರಣ ಬೆಳಕಿಗೆ ಬಂದಿದೆ. ಸುಮಾರು, 34 ಲಕ್ಷ ಅರ್ಹ ರೈತರು ತಮ್ಮ ಸಾಲ ಮನ್ನಾ ಹಕ್ಕಿನಿಂದ ವಂಚಿತರಾಗಿದ್ದು, ಸಂಭವಿಸಿರುವ ಭಾರಿ ಹಗರಣದಿಂದ 24 ಲಕ್ಷ ಅನರ್ಹ ಫಲಾನುಭವಿಗಳು ಲಾಭ ಮಾಡಿಕೊಂಡಿದ್ದಾರೆ. **ಸಿಎಜಿ ವರದಿಯು ಎಲ್ಲರ ಕಣ್ಣು ತೆರೆಸಿದ್ದು, ಈ ಹಗರಣದ ನಿಜವಾದ ಅಗಾಧತೆಯನ್ನು ಅರಿಯಲು ತಕ್ಷಣ ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಭಾಜಪ ಆಗ್ರಹಿಸುತ್ತದೆ.**

ಸಿಎಜಿ ಲೆಕ್ಕ ಪರಿಶೋಧನ ಸಂಸ್ಥೆ ಒಟ್ಟು 3.5 ಕೋಟಿ ಖಾತೆಗಳ ಪೈಕಿ ಕೇವಲ ೯೦,೦೦೦ ಖಾತೆಗಳ ಪರಿಶೀಲನೆ ನಡೆಸಿದೆ. ಈ ಒಂದು ಆಂಶಿಕ ಪರಿಶೀಲನೆಯಿಂದಲೇ ಸಿಎಜಿ ಕಂಡುಹಿಡಿದ ಅವ್ಯವಹಾರವೆಂದರೆ, ಅರ್ಹ ರೈತರ ಪಟ್ಟಿ ಮಾಡುವಾಗ, ಸಾಲ ನೀಡುವ ಸಂಸ್ಥೆಗಳು ಶೇಕಡ 13ರಷ್ಟು ಅರ್ಹ ರೈತರ ಹೆಸರುಗಳನ್ನು ಪರಿಗಣಿಸದೆ, ಶೇಕಡ ೮.೫ ರಷ್ಟು ಅನರ್ಹ ಫಲಾನುಭವಿಗಳಿಗೆ ಅನಗತ್ಯವಾದ ಭಾರಿ ಲಾಭ ಮಾಡಿಕೊಡಲಾಯಿತು. ಇವರಲ್ಲಿ ಹಲವರು ರೈತರಾಗದೆ ಇದ್ದಿರಲು ಸಾಧ್ಯ. ಪ್ರತಿಯೊಂದು ಖಾತೆಯ ಪರಿಶೀಲನೆಯ ನಂತರ ಅವಕಾಶ ವಂಚಿತ ಅರ್ಹ ರೈತರ ಸಂಖ್ಯೆ ಹಾಗೂ ಅರ್ಹರಲ್ಲದ ಫಲಾನುಭವಿಗಳ ಸಂಖ್ಯೆ ಹೆಚ್ಚುವ ಸಾಧ್ಯತೆಗಳಿವೆ. **ಮಾರ್ಚ್ 31,2013ರ ವರೆಗೂ ಅನ್ವಯವಾಗುವಂತೆ ಎಲ್ಲಾ ಅರ್ಹ ರೈತರ ಬಾಕಿ ಸಾಲ ಮನ್ನ ಮಾಡಬೇಕು ಎಂದು ಭಾಜಪ ಆಗ್ರಹಿಸುತ್ತದೆ.**

ಕಾಂಗ್ರೆಸ್ ಪಕ್ಷ ಹಾಗೂ ಭ್ರಷ್ಟಾಚಾರ ಇವೆರಡು ಸಮಾನಾರ್ಥಕ ಪದಗಳಾಗಿಬಿಟ್ಟಿವೆ. ಅದು ಸಿಡಬ್ಲ್ಯುಜಿ ಇರಬಹುದು, 2ಜಿ, ಇದ್ದಲು ಹಗರಣ, ಹೆಲಿಕಾಪ್ಟರ್ ಹಾಗೂ ಈಗ ಕೃಷಿ ಸಾಲ ಮನ್ನಾ ಹಗರಣವಿರಬಹುದು– ರಾಜ್ಯದ ಖಜಾನೆಯ ದುರ್ಬಳಕೆಯಿಂದ ಹಲವಾರು ಅನರ್ಹ ಫಲಾನುಭವಿಗಳಿಗೆ ಪ್ರಯೋಜನವಾಗಿದೆ.

ಮೂಲ ಯೋಜನೆಯೇ ದೋಷಪೂರಿತವಾಗಿದ್ದು, ಸಣ್ಣ ಮತ್ತು ಹಿಂದುಳಿದ ರೈತರು ಲೇವಾದೇವಿದಾರರಿಂದ ಸಾಲ ಪಡೆದ ಕಾರಣ ಈ ಯೋಜನೆಯ ಫಲ ಅವರಿಗೆ ಲಭಿಸಲಿಲ್ಲ. 1997ರ ನಂತರ ಎಲ್ಲಾ ಸಣ್ಣ ಹಾಗೂ ಹಿಂದುಳಿದ ರೈತರಿಗೆ ಸೌಲಭ್ಯವೊದಗಿಸಬೇಕಿತ್ತು. ಇವರಲ್ಲಿ ಹಲವರು ಅತೀವ ಶ್ರಮ ಮತ್ತು ಕಷ್ಟದಿಂದ ಸಾಲ ಪಾವತಿಸಿದ್ದರು, ಇಂಥವರಿಗೆ ಸೌಲಭವನ್ನು ನಿರಾಕರಿಸಲಾಯಿತು.

ಎಲ್ಲಕ್ಕಿಂತ ಆಘಾತಕಾರಿ ಸಂಗತಿಯೆಂದರೆ, ಅರ್ಹತೆಯಿಲ್ಲದಿದ್ದರೂ ಕೆಲವು ಕಿರು ಸಾಲ ನೀಡುವ ಸಂಸ್ಥೆಗಳು ಇದರ ಲಾಭ ಪಡೆದವು. ದಾಖಲೆ ತಿದ್ದುವಿಕೆ, ಚತ್ತುಮಾಡಿರುವ, ಬದಲಾವಣೆಗಳನ್ನು ಮಾಡಿರುವ ಉದಾಹರಣೆಗಳನ್ನು ಸಿಎಜಿ ಕಂಡುಹಿಡಿದಿದ್ದು, ಇದೊಂದು ಮೋಸದ ಪ್ರಕರಣವಾಗಿದ್ದು ಹಗರಣದ ರೂಪ ಪಡೆದಿದೆ. ಸಾರ್ವಜನಿಕರ ದುಡ್ಡು ಅರ್ಹರಲ್ಲದ ಕಿಸೆಯನ್ನು ಸೇರಿದೆ. ಅನ್ಯ ಕೆಲವು ಲೋಪಗಳನ್ನೂ ಸಹ ಸಿಎಜಿ ಪತ್ತೆ ಮಾಡಿದೆ, ಅದೆಂದರೆ ಶೇಕಡ ಆರರಷ್ಟು ರೈತರಿಗೆ ಅರ್ಹತೆಯಿದ್ದರು ಸಾಲ ಮನ್ನ ಸೌಲಭ್ಯವನ್ನು ನಿರಾಕರಿಸಲಾಗಿತ್ತು. ಹಲವಾರು ರೈತರಿಗೆ ಸಾಲ ಮನ್ನಾ ಪ್ರಮಾಣಪತ್ರ ನೀಡದೇ ಇರುವ ಕಾರಣ, ಹೊಸ ಸಾಲ ಪಡೆಯಲು ಅವರಿಗೆ ಕಷ್ಟವಾಗಿದೆ. ಸೂಕ್ತ ವಿಚಾರಣೆ ನಡೆದು ದೋಷಿಗಳಿಗೆ ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಭಾಜಪ ಆಗ್ರಹಿಸುತ್ತದೆ.

ಸಾಲ ಮನ್ನಾ ಯೋಜನೆಯ ಹೊರತಾಗಿಯು, ಕೃಷಿ ಕ್ಷೇತ್ರ ಯಾತನೆ ಅನುಭವಿಸಿದೆ. ರೈತರ ಆತ್ಮಹತ್ಯೆ ಪ್ರಕರಣಗಳು ಮುಂದುವರೆದಿವೆ. ಬೇಸಾಯಕ್ಕೆ ಯೋಗ್ಯ ಪದಾರ್ಥಗಳಾದ ರಸಗೊಬ್ಬರ, ಕೀಟನಾಶಕ, ಬೀಜ, ನೀರು, ವಿದ್ಯುತ್ ಮತ್ತು ಡೀಸಲ್ ಇತ್ಯಾದಿಗಳ ಬೆಲೆ ಹೆಚ್ಚಳದಿಂದ ಕೃಷಿ ವೃತ್ತಿ ದುಬಾರಿಯಾಗಿದೆ. ಗ್ರಾಹಕರು ನೀಡುವ ಬೆಲೆ ಹಾಗೂ ಉತ್ಪಾದನಾ ವೆಚ್ಚ ಇವೆರಡರ ನಡುವೆಯ ಅಂತರ, ಸಿಎಸಿಪಿ ಅಧ್ಯಯನದಂತೆ, ಕ್ಷೀಣಿಸುತ್ತಿದೆ. ಯುಪಿಎ ಆಳ್ವಿಕೆಯಲ್ಲಿ ವ್ಯಾಪಾರದ ಶರತ್ತುಗಳು ರೈತರ ವಿರುದ್ಧವಾಗಿವೆ. **ಸ್ವಾಮಿನಾಥನ್ ಆಯೋಗದ ವರಿದ ಶಿಫಾರಸ್ಸಿನಂತೆ "ಉತ್ಪಾದನಾ ವೆಚ್ಚ ಮತ್ತು ಹೆಚ್ಚುವರಿಯಾಗಿ ಶೇಕಡ 50" ರ ಲಾಭದಾಯಕ ಬೆಲೆ ನಿಗದಿ ಪದ್ದತಿಯನ್ನು ಸ್ವೀಕರಿಸಬೇಕು ಎಂದು ಭಾಜಪ ಆಗ್ರಹಿಸುತ್ತದೆ.**

**(ರಾಂ ಕ್ರಿಪಾಲ್ ಸಿನ್ಹಾ)**
**ಕಾರ್ಯದರ್ಶಿ, ಭಾಜಪ ಸಂಸದೀಯ ಪಾರ್ಟಿ**